‘ಪೇಪರಲ್ಲಿ ದಿನಾ ಬರುತ್ತೆ. ಅದನ್ನೂ ಹುಡುಕಿ ಕೊಡ್ಬೇಕಾ?’

ಪದರಂಗ ಇರುವ ಪುಟ ಮಡಿಸಿಕೊಟ್ಟು, ಪೆನ್ನು, ಕನ್ನಡಕ ಹುಡುಕಿಕೊಟ್ಟು, ಚಿದಾನಂದ ಆಕಳಿಸುತ್ತಾ ಕಾಲಹರಣ ಮಾಡುತ್ತಿದ್ದನೇ ವಿನಾ ಒಂದಕ್ಷರ ಬರೆಯುವ ಗೋಜಿಗೆ ಹೋಗುತ್ತಿರಲಿಲ್ಲ.

‘ಸುಲಭದ್ದು ಮೊದಲು ಬರೀರಿ. ಎರಡಕ್ಷರದ್ದು ಮೊದಲು ಬರೀರಿ’ ಹುರಿದುಂಬಿಸುತ್ತಿದ್ದಳು ಶೀಲಾ.

‘ಯಾಕೆ ಬರೀಬೇಕು? ಅದಕ್ಕೇನು ದುಡ್ಡು ಕೊಡ್ತಾರಾ?’

‘ತಲೆ ಸರಿ ಇಟ್ಕೋಬೇಕಾದ್ರೆ ತಲೆಗೆ ಕೆಲಸ ಕೊಡ್ಬೇಕು ಮಾವ’.

‘ಯಾಕೆ ಸರಿ ಇಟ್ಕೋಬೇಕು? ಇರೋ ಹಾಗೆ ಅದು ಇರುತ್ತಪ್ಪಾ...’

ಕ್ರಮೇಣ ಶೀಲಾಳಿಗೆ ಗೊತ್ತಾಗಿತ್ತು, ಎಡದಿಂದ ಬಲಕ್ಕೆ, ಮೇಲಿನಿಂದ ಕೆಳಕ್ಕೆ ಅನ್ನುವುದನ್ನು ಗುರುತಿಸುವುದಕ್ಕೆ ಮಾವನಿಂದ ಸಾಧ್ಯವಾಗುತ್ತಿಲ್ಲ. ವಿಪರೀತದ ಕಲಸುಮೇಲೋಗರ. ಒಂದಷ್ಟು ದಿನ ತಾನೂ ಅವನ ಜೊತೆ ಕೂತು ಸಹಾಯ ಮಾಡಲು ನೋಡಿದ್ದಳು. ತೀರಾ ಸುಲಭದ ಪದ ಗುರ್ತಿಸುವುದಕ್ಕೂ ಅವನು ಗಂಟೆಗಟ್ಟಲೆ ತೆಗೆದುಕೊಳ್ಳುವಾಗ ಅವಳ ಸಹನೆ ಸೋತು ಆ ಕೆಲಸ ಕೈ ಬಿಟ್ಟಿದ್ದಳು. ಪರಿಸ್ಥಿತಿ ದಿನೇ ದಿನೇ ಅನ್ನುವಂತೆ ಬಿಗಡಾಯಿಸುತ್ತಾ ಹೋಗುತ್ತಿದೆಯೇ ಹೊರತು ಸುಧಾರಣೆಯ ಯಾವ ಲಕ್ಷಣವೂ ಇಲ್ಲ. ಬಚ್ಚಲಿಗೆ ಹೋದರೆ ಲೈಟ್ ಆರಿಸಿ ಬರುವುದನ್ನು ಮರೆಯುತ್ತಾನೆ. ನಲ್ಲಿಯಲ್ಲಿ ನೀರು ತಿರುಗಿಸಿದರೆ ನಿಲ್ಲಿಸುವುದನ್ನು. ಅವನ ಹಿಂದೆ ಒಂದು ಜನ ಇರಲೇಬೇಕು. ಸಾಲದ್ದಕ್ಕೆ ಇತ್ತೀಚೆಗೆ ಅವನ ಸಿಡುಕು ಅತಿಯಾಗತೊಡಗಿದೆ. ಹಾಗಲ್ಲ ಹೀಗೆ... ಅಂದರೆ ಉರಿದು ಬೀಳುತ್ತಾನೆ. ಶೌಚಾಲಯದ ಘಟನೆ ನಡೆದ ದಿನ ಶೀಲಾ ಗಂಡನೊಡನೆ ಕೂಗಾಡಿದ್ದಳು.

‘ಇನ್ನು ನಿಮ್ಮಪ್ಪನ್ನ ನೋಡ್ಕಳ್ಳೋಕೆ ನನ್ನ ಕೈಲಿ ಸುತರಾಂ ಸಾಧ್ಯ ಇಲ್ಲ. ಒಂದಿನ ನಾನೂ ಹುಚ್ಚು ಹಿಡಿದು ಬೀದಿ ಬೀದಿ ಅಲೀತೀನಿ. ಬೇಕಾದ್ರೆ ಬರೆದಿಟ್ಕೊಳ್ಳಿ, ಅವರಿಗಿಂತ ಮುಂಚೆ ನಾನೇ ಸಾಯ್ತೀನಿ. ಈಗಾಗ್ಲೇ ಬಿ.ಪಿ. ಶುರುವಾಗಿದ್ರೆ ಆಶ್ಚರ್ಯ ಇಲ್ಲ. ಇದು ಮನೇನೇ ಅಲ್ಲ. ಜೈಲು, ಜೈಲು...’

ಭಾರ್ಗವ ತಲೆಯ ಮೇಲೆ ಕೈ ಹೊತ್ತಿದ್ದ. ಶೀಲಾಳ ತೌರುಮನೆಯವರು ಮಗಳ ಸಹಾಯಕ್ಕೆ ಬರಲು ಹಿಂದೆಗೆಯುವವರಲ್ಲ. ಆದರೆ ಅವರಿಗೂ ವಯಸ್ಸಾಗುತ್ತಿದೆ. ಅವರ ಸಂಸಾರದ ತಾಪತ್ರಯಗಳಿವೆ. ತನ್ನ ಕಷ್ಟವನ್ನು ಅವರ ಮೇಲೆ ಹೊರಿಸಲು ಶೀಲಾ ಸಿದ್ಧಳಿಲ್ಲ. ‘ನೋಡೋಣ, ಕಾಲ ಬರಲಿ...’ ಅಂದುಕೊಳ್ಳುತ್ತಾ ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದಳು ಶೀಲಾ. ಆ ಕಾಲ ಹತ್ತಿರ ಹತ್ತಿರವಾಗುತ್ತಿದೆಯೆನ್ನುವ ಸೂಚನೆಯೆಂಬಂತೆ ಇತ್ತೀಚೆಗೆ ತನ್ನ ಬಟ್ಟೆಬರೆಗಳನ್ನು ಧರಿಸಿಕೊಳ್ಳುವುದಕ್ಕೆ, ತನ್ನ ಸ್ವಂತದ ಕೆಲಸಗಳನ್ನು ಮಾಡಿಕೊಳ್ಳುವುದಕ್ಕೆ ತಡವರಿಸತೊಡಗಿದ್ದಾನೆ ಚಿದಾನಂದ. ಸಮಯದ ಪರಿವೆ ಮರೆಯಾಗತೊಡಗಿದೆ. ಮನೆಯವರ ಜೊತೆ ಮಾತ್ರವಲ್ಲ, ಕಣ್ಣಿಗೆ ಬಿದ್ದವರ ಜೊತೆಯೂ ಕಾಲು ಕೆರೆದು ಜಗಳ ತೆಗೆಯಲು, ಕೆಟ್ಟ ಮಾತು ಪ್ರಯೋಗಿಸಿ ಬೈಯಲು ಬಲವಾದ ಕಾರಣ ಬೇಕಿಲ್ಲ. ಅಥವಾ ಕಾರಣವೇ ಬೇಕಿಲ್ಲ. ಬೇರೆ ಯಾರು ಸಿಗದಿದ್ದರೂ ಬಾಡಿಗೆಮನೆಯವರು ದಿನದಿನವೂ ಕಣ್ಣಿಗೆ ಬಿದ್ದೇ ಬೀಳುತ್ತಾರಲ್ಲ?

‘ಡಾಕ್ಟ್ರು ಹತ್ರ ಒಂದ್ಸಲ ಕರ್ಕೊಂಡ್ಹೋಗೋಣ್ವಾ? ಯಾವುದಾದ್ರೂ ಹೊಸ ಔಷಧಿ ಬಂದಿರಬಹುದು...’ ಭಾರ್ಗವ ಹೆಂಡತಿಯ ಸಲಹೆ ಕೇಳಿದ್ದ.

‘ಮರೆವಿನ ಕಾಯಿಲೆಗೆ ಮದ್ದಿಲ್ವಂತೆ ಕಣ್ರೀ. ವಯಸ್ಸಾದೋರು ಎಷ್ಟೋ ಜನಕ್ಕೆ ಈ ಕಾಯಿಲೆ ಬರುತ್ತಂತೆ. ಅದೇನೋ ಹೆಸರು ಇದೆಯಂತಲ್ಲ?’

‘ಅಲ್ಜೈಮರ್...’

‘ಓ, ಎಲ್ಲಾ ಗೊತ್ತಿದೆ ನಿಮಗೆ’.

‘ಆದ್ರೂ ನಮ್ಮ ಕರ್ತವ್ಯ ಮಾಡ್ಬೇಕಲ್ಲ?’

‘ದುಡ್ಡು ಕುಣೀತಿದ್ರೆ ಮಾಡಿ. ಬೇಡಾಂತ ಹೇಳಿ ನಾನ್ಯಾಕೆ ಕೆಟ್ಟೋಳಾಗ್ಲಿ?’

ಅಲ್ಲಿಗೆ ಆ ಪ್ರಸ್ತಾಪ ನಿಂತು ಹೋಗಿತ್ತು.

* * *

ಬೆಳಗಿನ ಎಂಟರ ಸಮಯ. ಕೆಲಸಕ್ಕೆ ಹೊರಡಲು ಸಿದ್ಧನಾಗುತ್ತಿದ್ದ ಭಾರ್ಗವ. ‘ಯಾರದು? ಏನು ಬೇಕಾಗಿತ್ತು? ಸೀದಾ ಒಳಗೆ ನುಗ್ಗಿದೀರಲ್ಲ?’ ಚಿದಾನಂದ ದೊಡ್ಡ ಗಂಟಲಲ್ಲಿ ಮಾತಾಡಿದ್ದು ಕೇಳಿಸಿಕೊಂಡು ಯಾರೋ ಬಂದಿದ್ದಾರೆಂದು ಭಾವಿಸಿ ತನ್ನ ಕೋಣೆಯಿಂದ ಹೊರಗೆ ಬಂದ ಭಾರ್ಗವ. ಮುಂಬಾಗಿಲು ಮುಚ್ಚಿದ್ದು ಮುಚ್ಚಿದ ಹಾಗೆಯೇ ಇದೆ. ಬೆಳಗಾಮುಂಚೆ ಈ ಅಪ್ಪನ ಕಣ್ಣಿಗೆ ಯಾರು ಬಿದ್ದರಪ್ಪಾ? ಎಂದುಕೊಳ್ಳುತ್ತಾ ಅಪ್ಪನ ಕೋಣೆಯೊಳಗೆ ಹಣಿಕಿದ ಭಾರ್ಗವ ಬೆಪ್ಪು ಬಡಿದು ನಿಂತು ಬಿಟ್ಟ. ಬೀರುವಿನ ಬಾಗಿಲಿಗೆ ಅಳವಡಿಸಿದ ನಿಲುಗನ್ನಡಿಯೆದುರು ನಿಂತು ಬಾಯಿ ಮಾಡುತ್ತಿದ್ದಾನೆ ಚಿದಾನಂದ. ತನ್ನ ಪ್ರತಿಬಿಂಬವನ್ನೇ ಅಪರಿಚಿತರೆಂದು ಭಾವಿಸಿದ್ದಾನೆ. ತಿಂಡಿಯ ತಯಾರಿಯಲ್ಲಿದ್ದ ಶೀಲಾ ಕೂಡಾ ಗಂಡನ ಬಗಲಲ್ಲಿ ಬಂದು ನಿಂತಳು. ಚಿದಾನಂದನ ಅವತಾರ ನೋಡಿ ಗಂಡ ಹೆಂಡಿರಿಬ್ಬರ ಮುಖವೂ ವಿವರ್ಣವಾಯ್ತು.

‘ಮುಗೀತು ಕತೆ...’ ಅಂದ ಭಾರ್ಗವ.

‘ಇವತ್ತು ನೀವು ರಜಾ ಹಾಕಿ. ನನ್ನೊಬ್ಬಳನ್ನೇ ಬಿಟ್ಟು ಹೋಗ್ಬೇಡಿ’ ಅವನ ಕೈ ಹಿಡಿದುಕೊಂಡಳು ಶೀಲಾ.

‘ಇವತ್ತು ಹಾಕ್ಬೋದು. ಎಷ್ಟು ದಿನ ಅಂತ ರಜಾ ಹಾಕೋಕಾಗುತ್ತೆ?’ ಅಸಹಾಯಕತೆಯಿಂದ ಕೇಳಿದ ಭಾರ್ಗವ. ಅಪ್ಪನ ಬಳಿ ಹೋಗಿ ಅವರ ಕೈ ಹಿಡಿದು ಕರೆ ತಂದು ಮಂಚದ ಮೇಲೆ ಕೂರಿಸಿದ.

‘ಯಾಕೆ ಹೀಗಾಡ್ತಿ ಅಪ್ಪಾ? ನಿನ್ನ ಗುರುತೇ ನಿಂಗೆ ಸಿಗಲಿಲ್ವಾ?’ ಕೇಳಿದ.

‘ಯಾಕೆ? ಏನಾಯ್ತು?’

‘ಏನಾಗ್ಲಿಲ್ಲ ಬಿಡು, ಏನಾಗ್ಲಿಲ್ಲ...’

ಹೆಚ್ಚು ಮಾತಾಡಿ ಮಾವನನ್ನು ಕೆಣಕಬಾರದೆಂದು ಶೀಲಾ ತುಟಿಯ ಮೇಲೆ ತೋರುಬೆರಳಿಟ್ಟು ಸೂಚಿಸಿದಳು.

‘ಅಪ್ಪ, ಮಗ ಒಳಗೆ ಬನ್ನಿ. ತಿಂಡಿ ರೆಡೀ ಇದೆ...’ ಎನ್ನುತ್ತಾ ಒಳಗೆ ಹೋದಳು. ಮಗನನ್ನು ಸ್ಕೂಲಿಗೆ ಸಿದ್ಧ ಮಾಡಿ ಕಳಿಸಿ, ಅಪ್ಪ, ಮಗನ ತಿಂಡಿಯ ಕಲಾಪ ಮುಗಿದ ಮೇಲೆ ಭಾರ್ಗವ ಅಪ್ಪನನ್ನು ಬಚ್ಚಲಿಗೆ ಕರೆದುಕೊಂಡು ಹೋಗಿ ತಾನೇ ಸ್ನಾನ ಮಾಡಿಸಿದ. ಅಲ್ಲೂ ತಕರಾರು ತೆಗೆಯದೆ ಇರಲಿಲ್ಲ ಚಿದಾನಂದ.

‘ಸುಡೋ ನೀರು ಹಾಕಿ ಕೊಲ್ತೀಯಾ ನನ್ನ? ಅದ್ಯಾಕೆ ಅಷ್ಟು ಜೋರಾಗಿ ಬೆನ್ನು ಉಜ್ಜಿದ್ದಿ, ಚರ್ಮ ಸುಲೀಬೇಕು ಅಂತಾ? ಎಲ್ಲಾ ಸೇರ್ಕೊಂಡು ನನ್ನ ಮುಗಿಸೋಕೆ ಪ್ಲಾನ್ ಮಾಡಿದೀರಾ? ಆ ರಾಕ್ಷಸಿ ನನ್ನ ಕೊಲ್ಲೋಕೆ ಹೇಳಿದಾಳಾ?’ ಸ್ನಾನ ಮುಗಿಯುವವರೆಗೆ ನಡೆಯಿತು ಮಂತ್ರಪುಷ್ಪ. ಭಾರ್ಗವ ಅಪ್ಪನ ವಾಕ್ಪ್ರಹಾರದಿಂದ ಸುಸ್ತಾಗಿ ಹೋಗಿದ್ದ. ಮುಂದೇನು? ಹೀಗೇ ಆದರೆ ಮುಂದೇನು? ಎನ್ನುವ ಪ್ರಶ್ನೆ ಮಣಭಾರವಾಗಿ ತಲೆಯ ಮೇಲೆ ಕೂತಿತ್ತು. ಅರ್ಧಕ್ಕರ್ಧ ಇಳಿದು ಹೋಗಿದ್ದಾನೆ ಅಪ್ಪ. ಬಲವನ್ನೆಲ್ಲಾ ನಾಲಿಗೆಗೆ ಆವಾಹಿಸಿಕೊಂಡುಬಿಟ್ಟಿದ್ದಾನೆ. ರಜಾ ದಿನ ಹೊರತುಪಡಿಸಿ ತಾನು ಮನೆಯಿಂದಾಚೆಗೆ ಹೋಗಿ ಬಿಡುತ್ತೇನೆ. ಒಮ್ಮೆ ಕೆಲಸಕ್ಕೆ ಹೋದ ಮೇಲೆ ಮನೆಯ ಚಿಂತೆ ದೇವರಾಣೆ ತಲೆಗೆ ಬರುವುದಿಲ್ಲ. ಹಗಲಿಡೀ ಅಪ್ಪನೊಡನೆ ಹೆಂಡತಿ ಅದು ಹೇಗೆ ಏಗುತ್ತಾಳೋ, ಪರಮಾತ್ಮ ಬಲ್ಲ. ಕಳೆದ ಜನ್ಮದ ಯಾವ ಋಣ ತೀರಿಸಲು ಕೆಲ ಹೆಣ್ಣುಮಕ್ಕಳು ಗಂಡನ ಮನೆಯಲ್ಲಿ ಜೀವ ತೇಯುತ್ತಾರೋ ಎಂದು ಮೊಟ್ಟ ಮೊದಲ ಬಾರಿಗೆ ಅನಿಸಿ ಶೀಲಾ ಬಗ್ಗೆ ಕನಿಕರ ಎದೆ ತುಂಬಿ ಬಂತು. ಅವಳು ಯಾರೋ, ತಾನು ಯಾರೋ? ವಿಧಿ ಅವಳನ್ನು ಈ ಮನೆಗೆ ಕಟ್ಟಿ ಹಾಕಿದ್ದು ಹೇಗೋ? ಇಂಥವರಿಗೆ ಇಂಥವರೇ ಎಂದು ಬ್ರಹ್ಮ ಮೊದಲೇ ಹಣೆಬರಹ ಬರೆದು ಕಳಿಸಿರುತ್ತಾನೆ ಎನ್ನುವ ಮಾತು ಸತ್ಯವೇ? ಇಲ್ಲದಿದ್ದರೆ ಅವಳೇಕೆ ಈ ಮನೆಯ ಗೋಜಲುಗಳಿಗೆ ಸಿಕ್ಕಿಕೊಳ್ಳಬೇಕಿತ್ತು?

ಬಿಸಿನೀರ ಸ್ನಾನದಿಂದ ಬಳಲಿದಂತೆ ಕಂಡ ಅಪ್ಪ ಮಂಪರಿಗೆ ಜಾರಿದಾಗ ನಿಧಾನವಾಗಿ ಕೋಣೆಯ ಬಾಗಿಲು ಮುಂದಕ್ಕೆಳೆದು ಈಚೆಗೆ ಬಂದ ಭಾರ್ಗವ. ಅವನ ಬರುವಿಕೆಯನ್ನೇ ಕಾಯುತ್ತಿದ್ದವಳಂತೆ ಕೈಲಿ ನೆಪಮಾತ್ರಕ್ಕೆ ಅವತ್ತಿನ ಪೇಪರ್ ಹಿಡಿದು ಸೋಫಾದ ಮೇಲೆ ಕೂತಿದ್ದಳು ಶೀಲಾ. ಈಗ ಪೇಪರ್ ಓದುವುದನ್ನೂ ಬಿಟ್ಟು ಹಾಕಿದ್ದಾರೆ ಮಾವ. ಶೀಲಾ ಓದುವ ಪೈಕಿ ಅಲ್ಲ. ಅಭ್ಯಾಸಬಲದಿಂದ ಪೇಪರ್ ಹಾಕಿಸಿಕೊಳ್ಳುತ್ತಿದ್ದಾರೆ ಅಷ್ಟೇ. ಬೆಳಿಗ್ಗೆ ಮನೆಯಿಂದ ಹೊರಡುವ ಮುನ್ನ ತಲೆಬರಹದ ಮೇಲೆ ಭಾರ್ಗವ ಕಣ್ಣು ಹಾಯಿಸುವುದಕ್ಕಷ್ಟೇ ಪೇಪರಿನ ಉಪಯೋಗ. ಭಾರ್ಗವ ಬಂದು ಶೀಲಾ ಪಕ್ಕ ಕುಳಿತ.

‘ಮುಂದೆ ಏನು ಮಾಡೋದು ಮಾರಾಯ್ತೀ? ದುಡ್ಡು ಸುರಿದು ನೋಡ್ಕಳ್ಳೋಕೆ ಜನ ಇಟ್ಕೊಳ್ಳೋದು ನಮ್ಮಿಂದಂತೂ ಸಾಧ್ಯ ಇಲ್ಲ. ನನ್ನ ತಲೇನೇ ಕೆಟ್ಟೋಗಿದೆ...’ ಎನ್ನುತ್ತಾ ಹೆಂಡತಿಯ ಕಡೆ ಅಸಹಾಯಕ ದೃಷ್ಟಿ ಬೀರಿದ.

‘ನಿಮ್ಮಪ್ಪನಿಗೆ ನೀವೊಬ್ರೇ ಮಗನಾ? ಅವಳಿದಾಳಲ್ಲ, ಅಪ್ಪನ್ನ ನೋಡ್ಕೊಳ್ಳೋ ಜವಾಬ್ದಾರಿ ಅವಳಿಗೂ ಉಂಟು. ಒಂದಷ್ಟು ದಿನ ಅವಳ ಮನೆಗೆ ಕರ್ಕೊಂಡ್ಹೋಗ್ಲಿ. ಎಲ್ಲಕ್ಕೂ ನಾವೇ ತಲೆ ಕೊಡ್ತೀವಿ ಅಂತ ಬರ್ಕೊಟ್ಟಿಲ್ಲ ನಾವು. ನಂಗೂ